ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 1,89,243 ದಿ. 1.4.2000 ರಿಂದ 8.6.2000 ರವರೆಗೆ.

ಆ) 1,52,952.

ಇ) ಬೆಂಗಳೂರು ನಗರದ ತೆರಿಗೆದಾರರ ಕೋರಿಕೆಯ ಮೇರೆಗೆ ದಿನಾಂಕ 1.11.2000 ರಿಂದ 30.11.2000ರವರೆಗೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಪುನಃ ಜಾರಿಗೆ ತರಲಾಗಿದೆ.

ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸುವುದು

4480 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ತಮ್ಮ ಜಮೀನುಗಳಿಗೆ ಒಳಪಡಿಸಿಕೊಂಡಿರುವ ಐ.ಪಿ. ಸೆಟ್ಟಿನ ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳವುದೆ?

ಆ) ರೈತರು ತೊಂದರೆಯಲ್ಲಿರುವುದರಿಂದ ಯಾವುದೇ ದಂಡ ಅಥವಾ ಹಣವನ್ನು ತೆಗೆದುಕೊಳ್ಳದೇ ಈ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿರುವ ಅನಧಿಕೃತ ನೀರಾವರಿ ಪಂಪು ಸೆಟ್ಟುಗಳನ್ನು ಪುನಃ 1.7.2000ದಿಂದ ಸಕ್ರಮಗೊಳಿಸಲಾಗುತ್ತಿದ್ದು, ಸಕ್ರಮಗೊಳಿಸುವ ಅವಧಿಯನ್ನು ದಿನಾಂಕ 30.11.2000ದ ವರೆಗೆ ಅಂತಿಮ ಅವಕಾಶವಾಗಿ ವಿಸ್ತರಿಸಲಾಗಿದೆ.

ಆ) ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ರೈತರಿಂದ ಅತ್ಯಲ್ಪ ಹಣವನ್ನು ಮಾತ್ರ ಪಾವತಿಸಿ ಕೊಳ್ಳಲಾಗುತ್ತಿದೆ. ಈ ಹಣವನ್ನು ಸಹಾ ರೈತರಿಂದ ವಸೂಲಿ ಮಾಡದೆ ನಿಗಮವು ಸಕ್ರಮಗೊಳಿಸಿದರೆ, ಸದರಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲು ಅಗತ್ಯವಿರುವ ವಿದ್ಯುತ್ ಮಾರ್ಗ ನಿರ್ಮಾಣ, ಟ್ರಾನ್ಸ್‌ಫಾರ್ಮರ್ ಅಳವಡಿಕೆ ಇತ್ಯಾದಿ ಮೂಲಭೂತ ಸೌಕರ್ಯಗಳಿಗೆ ಹಣ ಪೂರೈಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಅತ್ಯಂತ ಕಷ್ಟಕರವಾಗುತ್ತದೆ. ಆದ್ದರಿಂದ ಯಾವುದೇ ದಂಡ ಅಥವಾ ಹಣವನ್ನು ತೆಗೆದುಕೊಳ್ಳದೆ ಸಕ್ರಮಗೊಳಿಸುವ ಯೋಜನೆಯು ಕ.ವಿ.ಪ್ರ.ನಿ.ನಿ. ಯಲ್ಲಿರುವುದಿಲ್ಲ.

ಸರ್ವಪ್ರಿಯಾ ಯೋಜನೆ ಬಗ್ಗೆ

4481 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ನಿರ್ದೇಶನದಂತೆ ಸಾರ್ವಜನಿಕರಿಗೆ ಪಡಿತರ ವ್ಯವಸ್ಥೆಯಡಿಯಲ್ಲಿ